## ವರ್ಣಮಾಲೆ

ಕನ್ನಡದಲ್ಲಿ ಒಟ್ಟು ೪೯(49)ಅಕ್ಷರಗಳಿವೆ ಇವುಗಳನ್ನು ವರ್ಣಗಳೆಂದು ಕರೆಯುತ್ತಾರೆ ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ 'ವರ್ಣಮಾಲೆ' ಎಂದು ಹೆಸರು.

ವರ್ಣಮಾಲೆಯಲ್ಲಿ ಪ್ರಮುಖವಾಗಿ ೩ ವಿಧಗಳು

೧) ಸ್ವರಗಳು ೨) ವ್ಯಂಜನಗಳು ೩) ಯೋಗವಾಹಗಳು

೧) ಸ್ವರಗಳು: ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಗಳು.

ಒಟ್ಟು ಸ್ವರಗಳು : ೧೩(13)

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

೨) ವ್ಯಂಜನಗಳು : ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು ವ್ಯಂಜನಗಳು.

ವ್ಯಂಜನಗಳಲ್ಲಿ ಎರಡು ವಿಧ :

ಅ) ವರ್ಗೀಯ ವ್ಯಂಜನಗಳು

ಆ) ಅವರ್ಗೀಯ ವ್ಯಂಜನಗಳು

ಅ) ವರ್ಗೀಯ ವ್ಯಂಜನಗಳು:೨೫(25)

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಆ) ಅವರ್ಗೀಯ ವ್ಯಂಜನಗಳು: ೯(9)

ಯ ರ ಲ ವ ಶ ಷ ಸ ಹ ಳ

೩) ಯೋಗವಾಹಗಳು: ೨(2)

ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರ ಎಂದರ್ಥ.

ಅನುಸ್ವಾರ: ಅಂ. ವಿಸರ್ಗ: ಅಃ

---

## ಸಂಯುಕ್ತಾಕ್ಷರಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ.

ಸಂಯುಕ್ತಾಕ್ಷರಗಳಲ್ಲಿ ಎರಡು ವಿಭಾಗಗಳಿವೆ.

೧.ಸಜಾತೀಯ ಸಂಯುಕ್ತಾಕ್ಷರಗಳು: ಒಂದೇ ಜಾತಿಯ ಎರಡು ವ್ಯಂಜನಗಳು ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು.

ಉದಾ: ಅಪ್ಪ, ಅಮ್ಮ, ಅಣ್ಣ, ಅಕ್ಕರ, ಅಕ್ಕಪಕ್ಕ, ರಕ್ಕಸ.

---

೨) ವಿಜಾತೀಯ ಸಂಯುಕ್ತಾಕ್ಷರಗಳು: ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಒಂದಕೊಂದು ಕೂಡಿಕೊಂಡು ಉಂಟಾಗುವ ಅಕ್ಷರವು ವಿಜಾತೀಯ ಸಂಯುಕ್ತಾಕ್ಷರಗಳು.

ಉದಾ: ಚಕ್ರ, ಆಜ್ಞೆ, ಸ್ತ್ರೀ, ವಸ್ತ್ರ.

---

## ವಚನಗಳು

ವಚನ ಎಂದರೆ ಸಂಖ್ಯೆ ಎಂದರ್ಥ.

ಕನ್ನಡದಲ್ಲಿ ವಚನಗಳು ಎರಡು

1.ಏಕವಚನ 2.ಬಹುವಚನ

1.ಏಕವಚನ : ಒಂದು ಎಂಬುದನ್ನು ಸೂಚಿಸುವ ಶಬ್ಧಗಳಿಗೆ ಏಕವಚನ ಎನ್ನುವರು.

2.ಬಹುವಚನ : ಒಂದಕಿಂತ ಹೆಚ್ಚು ಎಂದು ಸೂಚಿಸುವ ಶಬ್ಧಗಳಿಗೆ ಬಹುವಚನ ಎನ್ನುವರು.

| ಏಕವಚನ. | | ಬಹುವಚನ |
|---|---|---|
| 1. ಪತ್ರ | - | ಪತ್ರಗಳು |
| 2. ಎತ್ತು | - | ಎತ್ತುಗಳು |
| 3. ಪತ್ರಿಕೆ | - | ಪತ್ರಿಕೆಗಳು |
| 4. ನಾಯಕ | - | ನಾಯಕರು |
| 5. ತಮ್ಮ | - | ತಮ್ಮಂದಿರು |
| 6. ಅಣ್ಣ | - | ಅಣ್ಣಂದಿರು |

---